# ಆರ್‌ಬಿಐ ಚಿತ್ತ ಹೊಸ ಪಾವತಿಯತ್ತ




**ಸದ್ಯ ದೇಶದಲ್ಲಿ ಬಳಕೆಯಲ್ಲಿರುವ ಪೇಮೆಂಟ್ ವ್ಯವಸ್ಥೆಗಿಂತ ಅತ್ಯಾಧುನಿಕ ತಂತ್ರಜ್ಞಾನ ಆಧಾರಿತ ಪರ್ಯಾಯ ವ್ಯವಸ್ಥೆಯನ್ನು ಪರಿಚಯಿಸುವತ್ತ ಆರ್‌ಬಿಐ ಗಮನಹರಿಸಿದೆ.**

**■ ಶಶಿಕುಮಾರ್ ಸಿ.**

'ಭಾರತೀಯ ರಿಸರ್ವ್ ಬ್ಯಾಂಕ್' (ಆರ್‌ಬಿಐ) ಹೊಸ ಪಾವತಿ ವ್ಯವಸ್ಥೆಯನ್ನು ಪರಿಚಯಿಸುವ ನಿಟ್ಟಿನಲ್ಲಿ ಗಂಭೀರ ಚಿಂತನೆ ನಡೆಸಿದ್ದು, ಈ ಕುರಿತು ತಾತ್ವಿಕ ಹಂತದ ಪರಿಶೀಲನಾ ಕಾರ್ಯ ನಡೆಯುತ್ತಿದೆ. ಹೊಸ ಪಾವತಿ ವ್ಯವಸ್ಥೆ ಜಾರಿಗೆ ತರುವ ಆರ್‌ಬಿಐನ ಉದ್ದೇಶದ ಹಿಂದೆ ಭವಿಷ್ಯದ ನೋಟವು ಅಡಗಿದೆ.

ಯುಪಿಐ, ಆರ್‌ಟಿಜಿಎಸ್, ಎನ್‌ಇಎಫ್‌ಟಿ ಮತ್ತು ಐಎಂಪಿಎಸ್ – ದೇಶದಲ್ಲಿ ಸದ್ಯ ಬಳಕೆಯಲ್ಲಿರುವ ಡಿಜಿಟಲ್ ಪಾವತಿ ವ್ಯವಸ್ಥೆಯ ವಿಧಾನಗಳಿವು. ಈ ವ್ಯವಸ್ಥೆಗಳ ಮೂಲಕವೇ ದೇಶದಲ್ಲಿ ಕೋಟ್ಯಂತರ ರೂಪಾಯಿ ವರ್ಗಾವಣೆ ವಹಿವಾಟು ನಡೆಯುತ್ತಿದ್ದು, ಇದು ಸಂಪೂರ್ಣವಾಗಿ ಡಿಜಿಟಲ್ ವ್ಯವಸ್ಥೆಯೇ ಆಗಿದೆ.

ಸರ್ವರ್ ನೆಟ್‌ವರ್ಕ್‌ನಿಂದ ಈ ಪಾವತಿ ವ್ಯವಸ್ಥೆಯು ಸರಾಗವಾಗಿ ನಡೆಯುತ್ತಿದೆ. ಆದರೆ, ಆಯಾಯ ಬ್ಯಾಂಕ್‌ಗಳ ಸರ್ವರ್ ನೆಟ್‌ವರ್ಕ್‌ನಲ್ಲಿ ಸಣ್ಣ ಅಡಚಣೆ ಎದುರಾದರೂ ಗಂಟೆಗಟ್ಟಲೆ ಹಣ ಪಾವತಿ ವ್ಯವಸ್ಥೆಯು ಸ್ಥಗಿತಗೊಳ್ಳುತ್ತದೆ. ಅಲ್ಲದೆ ನೈಸರ್ಗಿಕ ವಿಪತ್ತು, ಉದ್ವಿಗ್ನ ಪರಿಸ್ಥಿತಿ, ಯುದ್ಧದ ಸಂದರ್ಭ ಸೇರಿದಂತೆ ದುರಂತ ಘಟನೆಗಳು ನಡೆದಾಗಲೆಲ್ಲ ಸರ್ವರ್ ಸ್ಥಗಿತಗೊಳ್ಳುವುದು ಸಹಜ. ಇದರಿಂದ ಸರಾಗವಾಗಿ ಹಣ ಪಡೆಯಲಾಗದೇ ದೇಶದಾದ್ಯಂತ ಕೋಟ್ಯಂತರ ಮಂದಿ ಏಕಕಾಲಕ್ಕೆ ಸಮಸ್ಯೆ ಎದುರಿಸುತ್ತಾರೆ. ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿರುವ ಆರ್‌ಬಿಐ, ಎಂತಹದ್ದೇ ದುರ್ಘಟನೆ ಅಥವಾ ನೈಸರ್ಗಿಕ ವಿಪತ್ತು ಸಂಭವಿಸಿದಾಗಲೂ ದೇಶದ ಹಣ ಪಾವತಿ ವ್ಯವಸ್ಥೆಯು ನಿರಾತಂಕವಾಗಿ ಸಾಗಬೇಕು ಮತ್ತು ಅದು ಯಾವುದೇ ಕಾರಣಕ್ಕೂ ಸ್ಥಗಿತಗೊಳ್ಳಬಾರದು ಎಂಬ ಕಾರಣಕ್ಕೆ ಹೊಸ ಪಾವತಿ ವ್ಯವಸ್ಥೆಯನ್ನು ಜಾರಿಗೆ ತರಲು ಮುಂದಾಗಿದೆ.

ಹಣಕಾಸು ಹರಿವು, ವಹಿವಾಟು ನಿಂತುಹೋಗುವಂಥ ಪರಿಸ್ಥಿತಿ ಎದುರಾದರೆ ಎನ್ನುವ ಪ್ರಶ್ನೆಗೆ ಆರ್‌ಬಿಐ ಬಳಿ ಪರ್ಯಾಯ ಮಾರ್ಗದ ಉತ್ತರವಿಲ್ಲ. ಇಂಥ ಆಪತ್ಕಾಲದ ಸಂಭಾವ್ಯತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹೊಸ ರೀತಿಯ ಪೇಮೆಂಟ್ ವ್ಯವಸ್ಥೆ ರೂಪಿಸಲಾಗುತ್ತದೆ ಎಂದು ಆರ್‌ಬಿಐನ ವಾರ್ಷಿಕ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ.

ಆರ್‌ಬಿಐ ಉದ್ದೇಶಿಸಿರುವ ಪಾವತಿ ವ್ಯವಸ್ಥೆಯನ್ನು 'ಲೈಟ್ ವೈಟ್ ಆ್ಯಂಡ್ ಪೋರ್ಟಬಲ್ ಪೇಮೆಂಟ್ ಸಿಸ್ಟಂ' (**LPSS – Light Weight and Portable Payment System**) ಎಂದು ಹೆಸರಿಸಲಾಗಿದೆ. ಹೆಸರೇ ಹೇಳುವಂತೆ ಹೊಸ ಪಾವತಿ ವ್ಯವಸ್ಥೆಯು ತೀರಾ ಸುಲಭವಾಗಿರಲಿದೆ. ಈ ವ್ಯವಸ್ಥೆಯು ಸಂಪೂರ್ಣ ಸ್ವಾಯತ್ತವಾಗಿದ್ದು (**Autonomous**), ಇದರ ನಿರ್ವಹಣೆಗೆ, ಈಗಿನ ಪಾವತಿ ವ್ಯವಸ್ಥೆಗೆ ಬೇಕಾದಂತೆ ಹೆಚ್ಚು ಜನರ ಅವಶ್ಯಕತೆಯೂ ಬೇಕಾಗಿಲ್ಲ.

ಯುಪಿಐ, ಆರ್‌ಟಿಜಿಎಸ್, ಎನ್‌ಇಎಫ್‌ಟಿಯಂತಹ ಇತರ ಪೇಮೆಂಟ್ ಸಿಸ್ಟಂಗಳು ದೊಡ್ಡ ಸಂಖ್ಯೆಯ ವಹಿವಾಟುಗಳ ನಿರ್ವಹಣೆಗೆಂದು ರೂಪಿಸಲಾಗಿದ್ದು, ಬಹಳ ಸಂಕೀರ್ಣ ಜಾಲದ ಮೇಲೆ ಅವಲಂಬಿತವಾಗಿವೆ. ನೈಸರ್ಗಿಕ ಅವಘಡದ ಸಂದರ್ಭದಲ್ಲಿ ಈ ವ್ಯವಸ್ಥೆ ಸರಿಯಾಗಿ ಕಾರ್ಯನಿರ್ವಹಿಸದೇ ಹೋಗಬಹುದು. ಆದ್ದರಿಂದ ಸಂಕೀರ್ಣ ತಂತ್ರಜ್ಞಾನ ಇಲ್ಲದ ಮತ್ತು ಬಂಕರ್ ರೀತಿಯಲ್ಲಿ ಉಪಯೋಗವಾಗುವಂತಹ ಹಣ ಪಾವತಿ ವ್ಯವಸ್ಥೆಯನ್ನು ರೂಪಿಸುವುದು ಆರ್‌ಬಿಐನ ಉದ್ದೇಶ.

'ಈ ವ್ಯವಸ್ಥೆಯಿನ್ನೂ ತಾತ್ವಿಕ ಹಂತದಲ್ಲಿದ್ದು, ಈಗಿರುವ ಯುಪಿಐ, ಆರ್‌ಟಿಜಿಎಸ್, ಎನ್‌ಇಎಫ್‌ಟಿ ಇತ್ಯಾದಿ ಪೇಮೆಂಟ್ ವ್ಯವಸ್ಥೆಗಿಂತ ತೀರಾ ಭಿನ್ನವಾಗಿರಲಿದೆ. ಇದಕ್ಕೆ ಬೇಕಾಗುವ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ವ್ಯವಸ್ಥೆಯೂ ತೀರಾ ಕಡಿಮೆ. ಅಗತ್ಯ ಇದ್ದಾಗ ಮಾತ್ರ ಇದನ್ನು ಆನ್ ಮಾಡಿಕೊಳ್ಳಬಹುದು' ಎಂದು ಆರ್‌ಬಿಐ ತಿಳಿಸಿದೆ. ■